ಇವುಗಳನ್ನು ತೆಗೆದುಕೊಳ್ಳುವಾಗ ಯಾವ ಯಾವ ಅಂಶಗಳನ್ನು ಎಷ್ಟು ತೆಗೆದುಕೊಳ್ಳಬೇಕು ಎನ್ನುವುದು ಒಂದು ದೊಡ್ಡ ಸವಾಲಾಯಿತು.

ಇಲ್ಲಿ ನಾನು ಈಸ್ಟ್ ಆ್ಯಂಡ್ ವೆಸ್ಟ್‌ನ ಎರಡು ಸಿದ್ಧಾಂತಗಳನ್ನು ಇಟ್ಟುಕೊಂಡು ಅದನ್ನು ಹುಡುಗ ಹುಡುಗಿಗೆ ಆರೋಪಿಸಿ ಇಬ್ಬರನ್ನೂ ಮುಖಾಮುಖಿಯಾಗಿಸಿ ಅವರು ಅದಕ್ಕೆ ಉತ್ತರ ಕಂಡುಕೊಳ್ಳುವ ರೀತಿಯ ಪ್ರಯತ್ನವನ್ನು ಮಾಡಿದ್ದೇನೆ. ಈ ಥರದ ಪ್ರಯತ್ನ ಮಾಡುವಾಗ ಅದು ಒಂದು ಕಮರ್ಷಿಯಲ್ ಸಿನಿಮಾನೂ ಆಗಿರಬೇಕು (ಕಮರ್ಷಿಯಲ್ ಅನ್ನುವುದನ್ನು ನಾನು ಸಂವಹನದ ದೃಷ್ಟಿಯಿಂದ ಹೇಳುತ್ತಿದ್ದೇನೆ). ಅಂದರೆ ಕ್ಲಾಸ್‌ಗೂ ಸಲ್ಲಬೇಕು, ಮಾಸ್‌ಗೂ ತಲುಪಬೇಕು ಎನ್ನುವ ಎಚ್ಚರ ನನಗಿತ್ತು. ಈ ಸಿನಿಮಾದ ಕಥೆ ಬರೆದಿದ್ದು ಕೂಡ ಈ ತಲೆಮಾರಿನ (ನನ್ನ ಮಗಳು ಕನಸು) ವ್ಯಕ್ತಿಯೇ ಆಗಿದ್ದರಿಂದ ಅವರು ಈ ಎಲ್ಲ ವಿಷಯಗಳನ್ನು ಹೇಗೆ ನೋಡುತ್ತಾರೆ ಅನ್ನುವುದನ್ನು ತಿಳಿದುಕೊಳ್ಳುವ ಪ್ರಯತ್ನವೂ ಇತ್ತು.

◆ **ವಸಿಷ್ಠ ಸಿಂಹ ಮತ್ತು ಮಾನ್ವಿತಾ ಕಾಮತ್ ಅವರ ಜೋಡಿ ಕುರಿತು ಹೇಳಿ?**

ಎನ್‌ಆರ್‌ಐ ಅಂದ್ರೆ ಹೀಗೇ ಇರ್ತಾರೆ ಎನ್ನುವ ಒಂದು ಮಿಥ್ ಅನ್ನು ನಾನು ಬ್ರೇಕ್ ಮಾಡ್ಬೇಕಿತ್ತು. ಹಾಗಾಗಿ ವಸಿಷ್ಠ ಸಿಂಹನ ಆಯ್ಕೆ ಮಾಡ್ಕೊಂಡೆ. ಅಲ್ಲದೆ ಇವನ ಸಿನಿಮಾಗಳನ್ನು ನೋಡುತ್ತಿದ್ದೆ. ಆಗ ನನಗೆ ಇವನು ವೈಬ್ರಂಟ್ ಮತ್ತು ಸಟಲ್ಡ್ ಆ್ಯಕ್ಟರ್ ಅಂತ ಅನಿಸಿತ್ತು. ಖಳನಾಯಕರಲ್ಲಿ ಸೂಕ್ಷ್ಮತೆ ಬಹಳ ಕಡಿಮೆ ಇರುತ್ತದೆ. ಆದರೆ ಇವನು ಖಳನಾಯಕನಾಗಿಯೂ ನಟನೆಯ ಸೂಕ್ಷ್ಮಗಳನ್ನು ಉಳಿಸಿಕೊಂಡಿದ್ದ. ಇವನು ಇನ್ನು ಮಚ್ಚು ಲಾಂಗುಗಳನ್ನು ಹಿಡಿದುಕೊಂಡಿರುವುದು ಬೇಡ ಅನಿಸಿತು. ಬೇರೆ ಏನೋ ಮಾಡಬಹುದು ಅನ್ನಿಸಿ ಆಯ್ಕೆ ಮಾಡಿದೆ. ಮಾನ್ವಿತಾಳನ್ನು ಕೂಡ 'ಕೆಂಡಸಂಪಿಗೆ'ಯಲ್ಲಿ ನೋಡಿದ್ದೆ. ಅವಳಲ್ಲಿ ಒಂದು ಚಿಕ್ಕ ಹಟಮಾರಿತನದ ಸ್ವಭಾವ ಇದ್ದಿದ್ದರಿಂದ ಈ ಚಿತ್ರದ ಪಾತ್ರಕ್ಕೆ ಹೊಂದುತ್ತಾಳೆ ಅನಿಸಿತು. ನೋಡೋದಕ್ಕೆ ಇವರ ಜೋಡಿ ಸ್ವಲ್ಪ ವೈರುಧ್ಯದ ಕಾಂಬಿನೇಷನ್ ಅನಿಸಬಹುದು. ಆದರೆ ನಾನು ಉದ್ದೇಶಪೂರ್ವಕವಾಗಿಯೇ ಮಾಡಿದೆ. ಯಾಕೆಂದರೆ ಇಂಗ್ಲೆಂಡ್ ಮತ್ತು ಇಂಡಿಯಾ ಕೂಡ ಹೀಗೆಯೇ ವೈರುಧ್ಯದ ಕಾಂಬಿನೇಷನ್ ಅಲ್ಲವೇ? ಇಂಥ ವೈರುಧ್ಯ ಅನಿಸುವ ಸಂಗತಿಗಳು ಒಂದಾಗುವುದು ತುಂಬ ಮುಖ್ಯ ಸಂಗತಿ ಅನಿಸಿತು. ಹಾಗಾಗಿ ಈ ಪಾತ್ರಗಳ ಮೂಲಕ ಎರಡು ದೇಶಗಳ ಕಥೆಯನ್ನು ಹೇಳಹೊರಟಿದ್ದೇವೆ. ■



# ಗೋದ್ರಾ

## ಹತ್ಯಾಕಾಂಡದ ಕಥೆಯೇ?



'ಗೋದ್ರಾ' ಈ ಹೆಸರು ಕೇಳಿದಾಕ್ಷಣ ಹತ್ಯಾಕಾಂಡದ ಭೀಕರ ಚಿತ್ರವೊಂದು ಎಲ್ಲರ ಮನಸಲ್ಲೂ ಮೂಡುತ್ತದೆ. ಕನ್ನಡದಲ್ಲಿ ಇದೇ ಹೆಸರಿನ ಸಿನಿಮಾವೊಂದು ಬರುತ್ತಿರುವುದು ಹಳೆಯ ಸುದ್ದಿ. ನೀನಾಸಂ ಸತೀಶ್ ಮತ್ತು ಶ್ರದ್ಧಾ ಶ್ರೀನಾಥ್ ಜೋಡಿಯಾಗಿ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ. ನಂದೀಶ್ ಅವರು ಈ ಚಿತ್ರಕ್ಕೆ ಮೊದಲ ಬಾರಿಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ತಮ್ಮ ಚಿತ್ರಕ್ಕೆ ಅವರು 'ಗೋದ್ರಾ' ಎಂದು ಹೆಸರಿಟ್ಟ ತಕ್ಷಣ ಅವರಿಗೆ ಎದುರಾದ ಪ್ರಶ್ನೆ, 'ಇದು ಗೋದ್ರಾ ಹತ್ಯಾಕಾಂಡವನ್ನು ಆಧರಿಸಿದ ಸಿನಿಮಾವೇ?'

ಈ ಪ್ರಶ್ನೆಗೆ ಅಡ್ಡಡ್ಡ ತಲೆಯಾಡಿಸಿದ್ದ ನಂದೀಶ್, 'ನಮ್ಮ ಸಿನಿಮಾಗೂ ಆ ಹತ್ಯಾಕಾಂಡಕ್ಕೂ ಯಾವ ಸಂಬಂಧವೂ ಇಲ್ಲ. ಈ ಚಿತ್ರದ ಕಥೆಗೆ ಒಪ್ಪುತ್ತದೆ ಎಂಬ ಕಾರಣಕ್ಕೆ ಮಾತ್ರ ನಾನು ಈ ಹೆಸರಿಟ್ಟಿದ್ದು' ಎಂದು ಸ್ಪಷ್ಟವಾಗಿ ಹೇಳಿದ್ದರು. ನಂತರ ಈ ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾದಾಗಲೂ ಇದೊಂದು ಸಸ್ಪೆನ್ಸ್ ಕಥೆ ಇರಬಹುದು ಎಂಬ ಊಹೆ ಹುಟ್ಟುವ ಹಾಗೆಯೇ ಇತ್ತು.

ಸತೀಶ್ ಅಭಿನಯದ 'ಚಂಬಲ್' ಸಿನಿಮಾಗಿಂತ ಮೊದಲೇ 'ಗೋದ್ರಾ' ಸಿನಿಮಾ ಕೆಲಸ ಶುರುವಾಗಿತ್ತು. ಆದರೆ ಕಾರಣಾಂತರಗಳಿಂದ 'ಚಂಬಲ್' ಪೂರ್ಣಗೊಂಡು ಬಿಡುಗಡೆಯಾದರೂ 'ಗೋದ್ರಾ' ತಣ್ಣಗೇ ಇತ್ತು. ಈಗ 'ಗೋದ್ರಾ' ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ. ಮತ್ತೆ ಈ ಚಿತ್ರದ ಕಥೆಗೂ ಹತ್ಯಾಕಾಂಡಕ್ಕೂ ಸಂಬಂಧ ಇದೆಯೇ ಎಂಬ ಅನುಮಾನಗಳು ಹುಟ್ಟಿಕೊಂಡಿದೆ. ಮೋಷನ್ ಪೋಸ್ಟರ್ ಬಿಡುಗಡೆಗೂ ಮುನ್ನಿನ ಒಂದು ಪೋಸ್ಟರ್‌ನ ಹಿನ್ನೆಲೆಯಲ್ಲಿನ ಒಂದು ಚಿತ್ರವೇ ಈ ಅನುಮಾನ ಮತ್ತೆ ಹುಟ್ಟಿಕೊಳ್ಳಲು ಕಾರಣ.

ಗೋದ್ರಾ ಹತ್ಯಾಕಾಂಡದ ಸಂದರ್ಭದಲ್ಲಿ ಮುಸ್ಲಿಂ ಯುವಕನೊಬ್ಬ ಕಣ್ಣೀರು ಸುರಿಸುತ್ತ, ಕೈ ಮುಗಿದು ಬೇಡಿಕೊಳ್ಳುತ್ತಿರುವ ಚಿತ್ರ ಸಾಕಷ್ಟು ಹರಿದಾಡಿತ್ತು. ಆ ಚಿತ್ರವನ್ನು ಜನರು ಇಂದಿಗೂ ಮರೆತಿಲ್ಲ. ನಂದೀಶ್ ನಿರ್ದೇಶನದ 'ಗೋದ್ರಾ' ಚಿತ್ರದ ಒಂದು ಪೋಸ್ಟರ್‌ನಲ್ಲಿಯೂ ಆ ಯುವಕನ ಚಿತ್ರವೇ ಇದೆ. ಹಾಗಾಗಿಯೇ ಈ ಚಿತ್ರಕ್ಕೂ ಗೋದ್ರಾ ಹತ್ಯಾಕಾಂಡಕ್ಕೂ ಸಂಬಂಧ ಇರಬಹುದೇ ಎಂಬ ಪ್ರಶ್ನೆ ಮತ್ತೆ ಮುನ್ನಲೆಗೆ ಬಂದಿದೆ. ಹಾಗೊಮ್ಮೆ ಸಂಬಂಧ ಇರುವುದೇ ಹೌದಾದಲ್ಲಿ, 'ಗೋದ್ರಾ' ಸುತ್ತ ವಿವಾದದ ಕಿಡಿ ಹೊತ್ತಿಕೊಂಡರೂ ಅಚ್ಚರಿಯಿಲ್ಲ. ■